# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 656
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ
(ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾಗಿದ ದಿನಾಂಕ : 20-02-2024.
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರು ಪುರಸ್ಕೃತ ಸ್ವಚ್ಛ ಭಾರತ ಅಭಿಯಾನವನ್ನು (ನಗರ) ಯಾವ ಸ್ಥಳೀಯ ನಗರ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ; ಈ ಯೋಜನೆಯ ಧ್ಯೇಯೋದ್ದೇಶಗಳು ಯಾವುವು; ಪೂರ್ಣ ಮಾಹಿತಿ ನೀಡುವುದು; | ಕೇಂದ್ರು ಪುರಸ್ಕೃತ ಸ್ವಚ್ಛ ಭಾರತ ಅಭಿಯಾನವನ್ನು (ನಗರ) ರಾಜ್ಯದ ಎಲ್ಲಾ 316 ನಗರಸ್ಥಳೀಯ ಸಂಸ್ಥೆಗಳಲ್ಲಿ (ಬಿಬಿಎಂಪಿ ಒಳಗೊಂಡಂತೆ) ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಸ್ವಚ್ಛ ಭಾರತ ಮಿಷನ್ (ನಗರ)-1.0** ಯೋಜನೆಯನ್ನು 2ನೇ ಅಕ್ಟೋಬರ್ 2014 ರಂದು ಜಾರಿಗೊಳಿಸಿದ್ದು, 31 ಮಾರ್ಚ್ 2024 ರ ವರೆಗೆ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶ ಬಯಲು ಮಲ ವಿಸರ್ಜನೆಯನ್ನು ತೊಡೆದುಹಾಕುವುದು, ಅವ್ಯವಸ್ಥಿತ/ ಅನುಪಯುಕ್ತ ಶೌಚಾಲಯಗಳನ್ನು ಹರಿ ನೀರು ಶೌಚಾಲಯವಾಗಿ ಪರಿವರ್ತಿಸುವುದು, ನಗರಪ್ರದೇಶದಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ವಸ್ತುಗಳ ಸಂಗ್ರಹಣೆ, ಮರುಬಳಕೆ, ವೈಜ್ಞಾನಿಕ ಸಂಸ್ಕರಣೆ ಹಾಗೂ ವಿಲೇವಾರಿ ಮಾಡುವುದು ಮತ್ತು ನೈರ್ಮಲ್ಯ ಮತ್ತು ಶುಚಿತ್ವದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು<br><br>**ಸ್ವಚ್ಛ ಭಾರತ ಮಿಷನ್ (ನಗರ)- 2.0** ಯೋಜನೆಯನ್ನು ದಿನಾಂಕ: 02-10-2021 ರಂದು 5 ವರ್ಷಗಳ ಅವಧಿಗೆ ಜಾರಿಗೊಳಿಸಿದ್ದು, ದಿನಾಂಕ: 01-10-2026 ರವರೆಗೆ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯ ಪ್ರಮುಖ ಉದ್ದೇಶವು ಎಲ್ಲಾ ನಗರಗಳನ್ನು ಕಸ ಮುಕ್ತ ನಗರ (Garbage free city) ಗಳನ್ನಾಗಿ ಪರಿವರ್ತಿಸುವುದು, ನಗರಗಳ ODF ಪ್ರಮಾಣೀಕರಣವನ್ನು ಉಳಿಸಿಕೊಳ್ಳುವುದು ಹಾಗೂ IEC ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವುದು & ಎಲ್ಲಾ ಹಿತಾಸಕ್ತಿದಾರರಿಗೆ ತರಬೇತಿಗಳ ಮೂಲಕ ಸಾಮರ್ಥ್ಯಾಭಿವೃದ್ಧಿಗೊಳಿಸುವುದು. |
| ಆ) | ಈ ಅಭಿಯಾನದಡಿ ಪ್ರತಿ ಸ್ಥಳೀಯ ನಗರ ಸಂಸ್ಥೆಗಳಿಗೆ ನಿರ್ಧಿಷ್ಟಪಡಿಸಿರುವ ಗುರಿಗಳು ಯಾವುವು ಮತ್ತು ಇವುಗಳ ಸಾಧನೆಗೆ ಕೇಂದ್ರು ಮತ್ತು ರಾಜ್ಯ ಸರ್ಕಾರಗಳಿಂದ ದೊರೆತಿರುವ ಆರ್ಥಿಕ ಅನುದಾನ ಮತ್ತು ಇತರೆ ನೆರವುಗಳು ಯಾವುವು; ಪೂರ್ಣ ಮಾಹಿತಿ ನೀಡುವುದು | **ಸ್ವಚ್ಛ ಭಾರತ ಮಿಷನ್ (ನಗರ)-1** ರಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣ, ಸಮುದಾಯ/ಸಾರ್ವಜನಿಕ ಶೌಚಾಲಯ ನಿರ್ಮಾಣ, ಘನತ್ಯಾಜ್ಯ ವಸ್ತುಗಳ ನಿರ್ವಹಣೆಗೆ ಅಗತ್ಯವಿರುವ ವಾಹನ ಯಂತ್ರೋಪಕರಣಗಳ ಖರೀದಿ, ತ್ಯಾಜ್ಯ ಸಂಸ್ಕರಣೆಗೆ ಅಗತ್ಯವಿರುವ Windrow platform, Processing shed, Trommel screen, Leachate collection tank, Compound wall, Weigh Bridge, Security room ಇತ್ಯಾದಿ ಕಾಮಗಾರಿಗಳನ್ನು ಪ್ರಸ್ತಾಪಿಸಿ ಡಿ.ಪಿ.ಆರ್ ಸಿದ್ದಪಡಿಸಿ ಜಿಲ್ಲಾ ಹಾಗು ರಾಜ್ಯ ಮಟ್ಟದ ಸಮಿತಿಯ ಅನುಮೋದನೆಯನ್ನು ಪಡೆಯಲಾಗಿರುತ್ತದೆ.<br><br>ಈ ಯೋಜನೆಯಡಿಯಲ್ಲಿ 3.19 ಲಕ್ಷ ವೈಯಕ್ತಿಕ ಶೌಚಾಲಯ, 11033 ಸೀಟ್ ಸಮುದಾಯ ಶೌಚಾಲಯ ಹಾಗೂ 5407 ಸೀಟ್ ಸಾರ್ವಜನಿಕ |

ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. 218 ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಯೋಜನಾವರದಿಯ ರೀ ್ಯ 5462 ಸಂಖ್ಯೆಯ ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿಗಳ ಪೈಕಿ 4283 ಸಂಖ್ಯೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ 1179 ಸಂಖ್ಯೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

**ಸ್ವಚ್ಛ ಭಾರತ ಮಿಷನ್ (ನಗರ) – 2.0**:

ಈ ಯೋಜನೆಯ ಘನತ್ಯಾಜ್ಯ ನಿರ್ವಹಣೆ, ಬಳಸಿದ ನೀರಿನ ನಿರ್ವಹಣೆ, ಐ.ಇ.ಸಿ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಬಳಸಿದ ನೀರಿನ ನಿರ್ವಹಣೆ ಕ್ರಿಯಾಯೋಜನೆಗೆ ರಾಜ್ಯ ಮಟ್ಟದ ಉನ್ನತಾಧಿಕಾರಯುಕ್ತ ಸಮಿತಿಯ ಅನುಮೋದನೆಯಾಗಿದ್ದು, ಕೇಂದ್ರದ ಅನುಮೋದನೆಗೆ ಕ್ರಿಯಾಯೋಜನೆಯನ್ನು ಸಲ್ಲಿಸಲಾಗಿರುತ್ತದೆ. ಉಪಘಟಕವಾರು ಪ್ರಗತಿಯು ಈ ಕೆಳಕಂಡಂತಿದೆ.

| **ಘಟಕಗಳು** | **ಒಟ್ಟು ಅನುಮೋದಿತ ಯೋಜನೆ ಮೊತ್ತ (ರೂ ಕೋಟಿಗಳು )** | **ಪ್ರಗತಿ ವರದಿ** |
|---|---|---|
| ಸುಸ್ಥಿರ ಘನತ್ಯಾಜ್ಯ ನಿರ್ವಹಣೆ | 2059.11 | 91 ಹೊಸದಾಗಿ ರಚಿಸಲಾದ ನಗರ ಸ್ಥಳೀಯ ಸಂಸ್ಥೆಗಳ ವಿಸ್ತೃತ ಯೋಜನಾ ವರದಿಗೆ (ಡಿ.ಪಿ.ಆರ್.) ರಾಜ್ಯ ಮಟ್ಟದ ಉನ್ನತಾಧಿಕಾರಯುಕ್ತ ಸಮಿತಿ ಅನುಮೋದನೆಯನ್ನು ನೀಡಿದ್ದು, ಸದರಿ ನಗರ ಸ್ಥಳೀಯ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. 296 ನಗರ ಸ್ಥಳೀಯ ಸಂಸ್ಥೆಗಳ ಡಿ.ಪಿ.ಆರ್.ಗೆ ರಾಜ್ಯ ಉನ್ನತಾಧಿಕಾರಯುಕ್ತ ಸಮಿತಿ ಅನುಮೋದನೆಯನ್ನು ನೀಡಿರುತ್ತದೆ ಹಾಗು ಸದರಿ ನಗರ ಸ್ಥಳೀಯ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ.<br><br>ಪಾರಂಪರಿಕ ತ್ಯಾಜ್ಯ (Legacy Waste) ನಿರ್ವಹಣೆಯಡಿ 186 ನಗರಗಳ ಡಿ.ಪಿ.ಆರ್.ಗಳು ಅನುಮೋದನೆಯಾಗಿವೆ. 33 ನಗರಗಳಲ್ಲಿ ಕೆಲಸ ಚಾಲನೆಯಲ್ಲಿರುತ್ತದೆ. ಉಳಿದ ನಗರಗಳು ಟೆಂಡರ್ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. |
| ಬಳಸಿದ ನೀರಿನ ನಿರ್ವಹಣೆ | 2284.20 | ರಾಜ್ಯದಲ್ಲಿ ಬಳಸಿದ ನೀರಿನ ನಿರ್ವಹಣೆಯ ಅನುಷ್ಠಾನಕ್ಕಾಗಿ KUIDFC ಸಂಸ್ಥೆಯು ರಾಜ್ಯ ನೋಡಲ್ ಸಂಸ್ಥೆಯಾಗಿರುತ್ತದೆ. ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ನಗರಗಳಿಗೆ STP ನಿರ್ಮಾಣ, I&D ಕಾಮಗಾರಿಗಳು |

| | | |
|---|---|---|
| | | ಹಾಗು Cesspool ಯಂತ್ರಗಳನ್ನು ಖರೀದಿಸಲು ಕ್ರಿಯಾಯೋಜನೆ ಸಿದ್ಧಪಡಿಸಿದ್ದು, ಅನುಮೋದನೆ ಹಂತದಲ್ಲಿರುತ್ತದೆ. |
| ಸುಸ್ಥಿರ ನೈರ್ಮಲ್ಯ | 177.91 | ಸುಸ್ಥಿರ ನೈರ್ಮಲ್ಯ ಕ್ರಿಯಾಯೋಜನೆ ಅನುಮೋದನೆಯಾಗಿರುತ್ತದೆ, ನಗರಗಳು ಶೌಚಾಲಯ ನಿರ್ಮಾಣದ ಅಂದಾಜು ಸಿದ್ಧಪಡಿಸಿದ್ದು, ಟೆಂಡರ್ ಕರೆಯುವ ಹಂತದಲ್ಲಿರುತ್ತವೆ. |
| ಐ.ಇ.ಸಿ. | 367.46 | ಐ.ಇ.ಸಿ. ಚಟುವಟಿಕೆಗಳ ಕ್ರಿಯಾಯೋಜನೆ ಅನುಮೋದನೆಯಾಗಿರುತ್ತದೆ, ಕೇಂದ್ರ ಸರ್ಕಾರವು ಮಾಹೆಯಾನ ನಿಗಧಿಪಡಿಸುವ ಚಟುವಟಿಕೆಗಳನ್ನು ನಗರಗಳಲ್ಲಿ ಕೈಗೊಳ್ಳಲಾಗುತ್ತಿದೆ. |
| ಸಾಮರ್ಥ್ಯಾಭಿವೃದ್ಧಿ | 184.53 | ಸಾಮರ್ಥ್ಯಾಭಿವೃಧ್ಧಿ ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ, ರಾಜ್ಯ ಹಾಗು ನಗರಗಳ ಮಟ್ಟದಲ್ಲಿ ನೈರ್ಮಲ್ಯತೆ ಕುರಿತು ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. |

ಕೇಂದ್ರ ಸರ್ಕಾರವು ಎಸ್.ಬಿ.ಎಂ ಯೋಜನೆಯ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರ ರೀತ್ಯಾ ಕೇಂದ್ರ ಸರ್ಕಾರ ಒದಗಿಸುವ ಅನುದಾನಕ್ಕೆ 60:40 ಅನುಪಾತದಡಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸಬೇಕಿರುತ್ತದೆ. ಕೇಂದ್ರ ಹಾಗು ರಾಜ್ಯ ಸರ್ಕಾರದಿಂದ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ.

ಸ್ವಚ್ಛ ಭಾರತ ಮಿಷನ್ (ನಗರ)-1.0 ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| **ಘಟಕಗಳು** | **ಕೇಂದ್ರದ ಬಿಡುಗಡೆ** | **ರಾಜ್ಯದ ಬಿಡುಗಡೆ** | **ಒಟ್ಟು ಬಿಡುಗಡೆ** |
|---|---|---|---|
| ವೈಯಕ್ತಿಕ ಶೌಚಾಲಯ ನಿರ್ಮಾಣ | 157.79 | 105.20 | 262.98 |
| ಸಮುದಾಯ/ ಸಾರ್ವಜನಿಕ ಶೌಚಾಲಯ ನಿರ್ಮಾಣ | 41.03 | 27.35 | 68.38 |
| ಘನತ್ಯಾಜ್ಯ ನಿರ್ವಹಣೆ | 512.52 | 341.68 | 854.20 |
| ಐ.ಇ.ಸಿ. | 17.62 | 11.75 | 29.37 |
| ಬಲವರ್ಧನೆ, ಆಡಳಿತ ಮತ್ತು ಕಛೇರಿ ವೆಚ್ಚ | 29.66 | 19.65 | 49.31 |
| | 758.62 | 505.63 | 1264.24 |

ಸ್ವಚ್ಛ ಭಾರತ ಮಿಷನ್ (ನಗರ)- 2.0 ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| **ಘಟಕಗಳು** | **ಕೇಂದ್ರದ ಬಿಡುಗಡೆ** | **ರಾಜ್ಯದ ಬಿಡುಗಡೆ** | **ಒಟ್ಟು ಬಿಡುಗಡೆ** |
|---|---|---|---|
| ಸುಸ್ಥಿರ ಘನತ್ಯಾಜ್ಯ ನಿರ್ವಹಣೆ | 11.48 | 7.65 | 19.13 |
| ಬಳಸಿದ ನೀರಿನ ನಿರ್ವಹಣೆ | | | |
| ಐ.ಇ.ಸಿ | 55.11 | 36.74 | 91.85 |
| ಸಾಮರ್ಥ್ಯಾಭಿವೃದ್ಧಿ | 27.68 | 18.45 | 46.13 |
| **ಒಟ್ಟು** | **94.27** | **62.84** | **157.11** |

| | | |
|---|---|---|
| ಇ) | ಈ ಅಭಿಯಾನದಡಿ ಸ್ಥಳೀಯ ನಗರ ಸಂಸ್ಥೆಗಳು ಸಾಧಿಸಿರುವ ಪ್ರಗತಿ ಬಗ್ಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ವತಿಯಿಂದ ಅಧ್ಯಯನ ನಡೆಸಲಾಗಿದೆಯೇ; ಹಾಗಿದ್ದಲ್ಲಿ ಈ ಅಧ್ಯಯನಗಳ ಸಾರಾಂಶಗಳು ಯಾವುವು; ಪೂರ್ಣ ಮಾಹಿತಿ ನೀಡುವುದು? | ಸ್ವಚ್ಛ ಭಾರತ ಮಿಷನ್(ನಗರ) ಯೋಜನೆಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರ ಮಟ್ಟದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನೆಯನ್ನು ನಡೆಸಲಾಗುತ್ತಿದೆ.<br><br>ಕೇಂದ್ರ ಸರ್ಕಾರವು ಪ್ರತಿ ವರ್ಷ ರಾಷ್ಟ್ರ ಮಟ್ಟದಲ್ಲಿ ಆಯೋಜಿಸುವ ಸ್ವಚ್ಛ ಸರ್ವೇಕ್ಷಣೆ ಸ್ಪರ್ಧೆಯಲ್ಲಿ ಸ್ವಚ್ಛ ಬಾರತ ಮಿಷನ್ ಯೋಜನೆಯ ಎಲ್ಲಾ ಘಟಕಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಸಾಧಿಸಿರುವ ಪ್ರಗತಿಯನ್ನು ವಿಮರ್ಷಿಸಿ ಉತ್ತಮ ಅಂಕಗಳಿಸುವ ನಗರಗಳಿಗೆ ಪ್ರಶಸ್ತಿಯನ್ನು ನೀಡಲಾಗುತ್ತದೆ.<br><br>2023ನೇ ಸಾಲಿನಲ್ಲಿ ರಾಜ್ಯದಲ್ಲಿ 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ನಗರಗಳಲ್ಲಿ ಮೈಸೂರು ಮಹಾನಗರಪಾಲಿಕೆಗೆ ಸ್ವಚ್ಛ ನಗರ ಹಾಗೂ 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯಿರುವ ನಗರಗಳಲ್ಲಿ ಹೊಸದುರ್ಗ ಸ್ವಚ್ಛ ನಗರ ಪ್ರಶಸ್ತಿಯನ್ನು ಪಡೆದಿರುತ್ತವೆ.<br><br>2022 ಹಾಗು 2023ನೇ ಸಾಲಿನಲ್ಲಿ ರಾಷ್ಟ್ರ ಮಟ್ಟದ ಅಧ್ಯಯನ ಸಾರಾಂಶ ವಿವರವನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |

ಕಡತ ಸಂಖ್ಯೆ: ನಅಇ 36 ಸಿಎಸ್ಎಸ್ 2024

16/02/2024

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

## SS 2023 State Ranking

| Position | State Name | Score |
|---|---|---|
| 1 | MAHARASHTRA | 3721.55 |
| 2 | MADHYA PRADESH | 3657.92 |
| 3 | CHHATTISGARH | 3425.41 |
| 4 | ODISHA | 3131.38 |
| 5 | TELANGANA | 3029.32 |
| 6 | ANDHRA PRADESH | 2816.83 |
| 7 | PUNJAB | 2605.49 |
| 8 | GUJARAT | 2328.14 |
| 9 | UTTAR PRADESH | 2286.87 |
| 10 | TAMIL NADU | 2263.47 |
| 11 | SIKKIM | 2069.96 |
| **12** | **KARNATAKA** | **2059.2** |
| 13 | GOA | 1990.15 |
| 14 | HARYANA | 1958.01 |
| 15 | BIHAR | 1815.25 |
| 16 | JHARKHAND | 1667.58 |
| 17 | MANIPUR | 1663.81 |
| 18 | HIMACHAL PRADESH | 1636.98 |
| 19 | UTTARAKHAND | 1589.39 |
| 20 | ASSAM | 1515.87 |
| 21 | MEGHALAYA | 1364.29 |
| 22 | KERALA | 1321.88 |
| 23 | TRIPURA | 1236.4 |
| 24 | NAGALAND | 1232.69 |
| 25 | RAJASTHAN | 1212.14 |
| 26 | MIZORAM | 1105.92 |
| 27 | ARUNACHAL PRADESH | 1073.75 |

## SS 2022 State Ranking

| Position | State Name | Score |
|---|---|---|
| 1 | MADHYA PRADESH | 4470 |
| 2 | CHHATTISGARH | 3890 |
| 3 | MAHARASHTRA | 3530 |
| 4 | TELANGANA | 2990 |
| 5 | PUNJAB | 2935 |
| 6 | TRIPURA | 2750 |
| 7 | JHARKHAND | 2450 |
| 8 | GUJARAT | 2360 |
| 9 | ANDHRA PRADESH | 2270 |
| 10 | UTTARAKHAND | 2245 |
| 11 | HIMACHAL PRADESH | 2200 |
| 12 | RAJASTHAN | 2150 |
| 13 | ODISHA | 2100 |
| 14 | UTTAR PRADESH | 2075 |
| 15 | BIHAR | 2000 |
| 16 | HARYANA | 1950 |
| **17** | **KARNATAKA** | **1925** |
| 18 | KERALA | 1650 |
| 19 | MANIPUR | 1500 |
| 20 | SIKKIM | 1500 |
| 21 | ASSAM | 1450 |
| 22 | TAMIL NADU | 1450 |
| 23 | GOA | 1400 |
| 24 | MIZORAM | 1400 |
| 25 | NAGALAND | 1350 |
| 26 | ARUNACHAL PRADESH | 1200 |
| 27 | MEGHALAYA | 1150 |